**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:10**

**ಎಸ್.ಸಿ. ಸಂಖ್ಯೆ: 530/22** ಹೆಚ್ಚುವರಿ ಸಾಕ್ಷಿ:**5**

**ಸಾಕ್ಷಿದಾರರ ಹೆಸರು** : ಮಂಜುನಾಥ ಎಸ್

**ತಂದೆ ಹೆಸರು** : ಶಣ್ಮುಕಪ್ಪ

**ವಯಸ್ಸು** : **35**

**ವೃತ್ತಿ** : ಉಪ ವಲಯ ಅರಣ್ಯಾಧಿಕಾರಿ, ಶಂಕರನಾರಾಯಣ ವಲಯ

**ವಾಸ** : ಶಂಕರನಾರಾಯಣ

**ದಿನಾಂಕ: 01-07-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು **2024**ರಿಂದ ಇಲ್ಲಿಯವರೆಗೆ ನಾನು ಶಂಕರನಾರಾಯಣ ವಲಯ ಮೊಳಹಳ್ಳಿ ಘಟಕದಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಕ್ಸಲ್ ಪ್ರಕರಣದಲ್ಲಿ ಕೃತ್ಯ ನಡೆದ ಪಂಚನಾಮೆ ನಡೆಸುವ ಸಮಯ ಪಂಚರಾಗಿ ಸಹಕರಿಸುವಂತೆ ಪೋಲೀಸು ಉಪಾಧೀಕ್ಷಕರು ನಮ್ಮ ವಲಯ ಅರಣ್ಯಾಧಿಕಾರಿಯವರಿಗೆ ಪತ್ರ ಬರೆದಂತೆ ಅವರು ನನ್ನನ್ನು ಮತ್ತು ಹೆಚ್ಚುವರಿ ಸಾಕ್ಷಿ **6** ಅಭಿನಂದನ್ ರವರನ್ನು ನಿಯೋಜಿಸುತ್ತಾರೆ. ಅದರಂತೆ ನಾವು ದಿ:**17-05-2022**ರಂದು ಬೆಳಿಗ್ಗೆ **8.00** ಗಂಟೆ ಸಮಯಕ್ಕೆ ಕುಂದಾಪುರ ಪೋಲೀಸು ಠಾಣೆಗೆ ಹೋಗಿದ್ದು ಕುಂದಾಪುರ ಪೋಲೀಸು ಠಾಣೆಯಲ್ಲಿ ಪಂಚನಾಮೆಗೆ ಪಂಚರಾಗಿ ಬರುವಂತೆ ನೋಟೀಸು ನೀಡಿದ್ದು ಸದ್ರಿ ನೋಟೀಸನ್ನು ಸ್ವೀಕರಿಸಿಕೊಂಡಿರುತ್ತೇವೆ. ನಾವು ಹೋದ ಸಮಯ ಪೋಲೀಸು ಠಾಣೆಯಲ್ಲಿ ಪೋಲೀಸು ಉಪಾಧೀಕ್ಷಕರು, ಪೋಲೀಸು ಸಿಬ್ಬಂದಿಗಳು, ನಕ್ಸಲೇಟ್ ಆರೋಪಿತರಾದ ಬಿ ಜಿ ಕೃಷ್ಣಮೂರ್ತಿ ಮತ್ತು ಸಾವಿತ್ರಿ ಎಂಬ ಮಹಿಳೆ ಹಾಜರಿದ್ದರು. ಮುದೂರು ಗ್ರಾಮದಿಂದ ಹಳ್ಳಿಹೊಳೆ ಗ್ರಾಮದ ವ್ಯಾಪ್ತಿಯೊಳಗೆ ಬರುವಂತಹಾ ಪ್ರದೇಶದಲ್ಲಿ ತಾವು ನಕ್ಸಲ್ ಚಟುವಟಿಕೆಯಲ್ಲಿರುವಾಗ ಕೃತ್ಯ ನಡೆದ ಸ್ಥಳವನ್ನು ತೋರಿಸಿಕೊಡುವುದಾಗಿ ಆರೋಪಿತರು ಹೇಳಿದ ಮೇರೆಗೆ ಸದ್ರಿ ಇಬ್ಬರು ಆರೋಪಿತರನ್ನು ಡಿ ವೈ ಎಸ್ ಪಿ ರವರು ಪೋಲೀಸು ಬೆಂಗಾವಲಿಯೊಂದಿಗೆ ಪೋಲೀಸು ವಾಹನದಲ್ಲಿ

ಕುಳ್ಳಿರಿಸಿಕೊಂಡು ಜೊತೆಯಲ್ಲಿ ಪಂಚರಾದ ನಮ್ಮನ್ನು ಕರೆದುಕೊಂಡು ಹೋಗುವಾಗ ಆರೋಪಿತರಲ್ಲಿ ಒಬ್ಬರಾದ ಬಿ ಜಿ ಕೃಷ್ಣಮೂರ್ತಿ ಎಡಗೇರಿಯಲ್ಲಿರುವ ಶೇಷಾಚಲ ಯಡಿಯಾಳರ ಮನೆಯ ಸಮೀಪ ವಾಹನ ನಿಲ್ಲಿಸಲು ಹೇಳಿದ್ದು ಶೇಷಾಚಲ ಯಡಿಯಾಳ ರವರಿಗೆ ಕೋವಿ ತೋರಿಸಿ ಬೆದರಿಕೆ ಹಾಕಿದ ಮನೆ ಎಂದು ತೋರಿಸಿದ ಸ್ಥಳವನ್ನು ಅಪರಾಧ ಕ್ರಮ ಸಂಖ್ಯೆ **3/2005**ರ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚನಾಮೆ ಮಾಡಿರುತ್ತಾರೆ. ಸದ್ರಿ ಸ್ಥಳವನ್ನು ತನಿಖಾಧಿಕಾರಿಯವರು ಪರಿಶೀಲನೆ ಮಾಡಿ **10.40** ರಿಂದ **11.05** ಗಂಟೆ ಅವಧಿಯಲ್ಲಿ ಪಂಚನಾಮೆ ತಯಾರಿಸಿರುತ್ತಾರೆ. ಪಂಚನಾಮೆ ಸಮಯ ನಕಾಶೆ ತಯಾರಿಸಿರುತ್ತಾರೆ ಮತ್ತು ಛಾಯಾಚಿತ್ರ ತೆಗೆದಿರುತ್ತಾರೆ. ಆರೋಪಿ ಬಿಜಿ ಕೃಷ್ಣಮೂರ್ತಿ ತೋರಿಸಿಕೊಟ್ಟಂತೆ ತಯಾರಿಸಿದ ತಕ್ಷೀರು ಸ್ಥಳ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-**21** ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-**21**ಎ ಎಂದು ಗುರುತಿಸಲಾಯಿತು. ಸ್ಥಳ ಮಹಜರು ಸಮಯ ತಯಾರಿಸಿದ ಸ್ಥಳ ನಕಾಶೆ ನೋಡಿ ಸಾಕ್ಷಿ ಗುರುತಿಸಿದ್ದು ಸದ್ರಿ ನಕಾಶೆಯನ್ನು ನಿಪಿ-**22** ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-**22**ಎ ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರು ಸಮಯ ತೆಗೆದ ಛಾಯಾಚಿತ್ರ ನೋಡಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿದ್ದು ಸದ್ರಿ ಒಂದು ಛಾಯಾಚಿತ್ರವನ್ನು ನಿಪಿ-**23** ಎಂದು ಗುರುತಿಸಲಾಯಿತು. ಸದ್ರಿ ಮಹಜರು ಮತ್ತು ನಕ್ಷೆಗೆ ನಾನು ಸ್ಥಳದಲ್ಲೇ ಸಹಿ ಮಾಡಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸು ಮೂಲಕ ಹಾಜರುಪಡಿಸಿದ ಆರೋಪಿ ಬಿ ಜಿ ಕೃಷ್ಣಮೂರ್ತಿ ಈತನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ** ಎಂ ಆರ್ ಕೆ ಟಿ **ವಕೀಲರಿಂದ**

ನನಗೆ ನನ್ನ ಮೇಲಾಧಿಕಾರಿ ತನಿಖೆಗೆ ಪಂಚರಾಗಿ ಹಾಜರಾಗಿ ಸಹಕರಿಸಲು ಯಾವುದೇ ಲಿಖಿತ ಆದೇಶ ನೀಡಿಲ್ಲ. ಕೇವಲ ಮೌಖಿಕವಾಗಿ ತಿಳಿಸಿರುತ್ತಾರೆ. ನಾವು ಸ್ಥಳಕ್ಕೆ ಹೋಗುವಾಗ **3 – 4** ಇಲಾಖಾ ವಾಹನದಲ್ಲಿ ಹೋಗಿದ್ದೆವು. ಆ ವಾಹನಗಳು ಇಲಾಖಾ ವಾಹನಗಳಾಗಿದ್ದು ಅವುಗಳ ಸಂಖ್ಯೆಯನ್ನು ಹೇಳಲಿಕ್ಕೆ ಬರುವುದಿಲ್ಲ. ಸ್ಥಳದಲ್ಲಿ ಕೇವಲ ಪೋಲೀಸರು ಮಾತ್ರ ಇಳಿದು ತನಿಖೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ಸರಿ ಅಲ್ಲಾ ಆರೋಪಿತರು ಸಹಾ ಅವರ ಜೊತೆ ಇಳಿದಿದ್ದರು ಅಂತ ನುಡಿಯುತ್ತಾರೆ. ನ್ಯಾಯಾಲಯದ ಮುಂದಿರುವಂತಹಾ ಆರೋಪಿತನನ್ನು ಇವತ್ತೇ ನಾನು ಪ್ರಥಮ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ ಅಲ್ಲಾ. ಪಂಚನಾಮೆ ನಿಪಿ-**21**ಕ್ಕೆ ಹಾಗೂ ನಿಪಿ-**22** ನಕ್ಷೆಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲಾ. ನಿಪಿ-**23** ಛಾಯಾಚಿತ್ರವನ್ನು ತನಿಖಾಧಿಕಾರಿಯವರು ಠಾಣೆ ಹತ್ತಿರ ತೆಗೆದಿದ್ದು ಅವರ ಕೋರಿಕೆಯಂತೆ ನಾನು ಸದ್ರಿ ಭಾವಚಿತ್ರದಲ್ಲಿ ನಿಂತು ನನ್ನ ಭಾವಚಿತ್ರ ತೆಗೆಯಲು ಸಹಕರಿಸಿದೆ ಎಂದರೆ ಸರಿ ಅಲ್ಲಾ. ನಾನು ಸಾಕ್ಷಿಯಲ್ಲಿ ಹೇಳಿದಂತೆ ಯಾವತ್ತಿಗೂ

ತನಿಖಾಧಿಕಾರಿಯವರ ಜೊತೆಯಲ್ಲಿ ಎಡಗೇರಿಯಲ್ಲಿರುವ ಶೇಷಾಚಲ ಯಡಿಯಾಳರ ಮನೆಯ ಹತ್ತಿರ ಹೋಗಿಯೇ ಇಲ್ಲಾ ಅಲ್ಲಿ ನ್ಯಾಯಾಲಯದ ಮುಂದಿರುವಂತಹಾ ಆರೋಪಿತ ಶೇಷಾಚಲ ಯಡಿಯಾಳ ರವರಿಗೆ ಬಂದೂಕು ತೋರಿಸಿ ಬೆದರಿಕೆ ಹಾಕಿದ ಸ್ತಳ ಎಂದು ತೋರಿಸಿಯೇ ಇಲ್ಲಾ ಎಂದರೆ ಸರಿ ಅಲ್ಲಾ. ನಾನು ಸರಕಾರಿ ನೌಕನಾಗಿರುವುದರಿಂದ ನೌಕರಿಗೆ ತೊಂದರೆ ಆಗುತ್ತದೆ ಅಂತ ತನಿಖಾಧಿಕಾರಿಯವರ ತನಿಖೆಗೆ ಪೂರಕವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**